ಹೊಳೇನರಸೀಪುರದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಬಗ್ಗೆ

283 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿನಲ್ಲಿ ಸರ್ಕಾರ ಮಂಜೂರು ಮಾಡಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?*

ಆ) *ಇದಕ್ಕಾಗಿ 1993-94ರಲ್ಲಿ ಎಷ್ಟು ಹಣವನ್ನು ಆಯವ್ಯಯದಲ್ಲಿ ಮಂಜೂರು ಮಾಡಲಾಗಿತ್ತು?*

ಇ) *1993-94ನೇ ಸಾಲಿನಲ್ಲಿ ಮಂಜೂರು ಮಾಡಿದಂತಹ ವಿದ್ಯಾರ್ಥಿನಿಲಯವನ್ನು ಇಲ್ಲಿಯವರೆಗೆ ಪ್ರಾರಂಭಿಸದೇ ಇರಲು ಕಾರಣವೇನು?*

ಈ) *1994-95ರಲ್ಲಿ ಹೊಸದಾಗಿ ಎಷ್ಟು ವಿಧ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ?*

ಉ) *1993-94ನೇ ಸಾಲಿನಲ್ಲಿ ಮಂಜೂರಾದ ವಿದ್ಯಾರ್ಥಿನಿಲಯವನ್ನು 1994-95ರಲ್ಲಿ ಪ್ರಾರಂಭಿಸಲಾಗುವುದೇ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ)

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ	ಸಮಾಜ ಕಲ್ಯಾಣ ಇಲಾಖೆ
1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿನಲ್ಲಿ ಸರ್ಕಾರವು 3 ಮೆಟ್ರಿಕ್ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳ ಮಂಜೂರು ಮಾಡಿದೆ.	2 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಗಳು ಮಂಜೂರಾಗಿವೆ.

ಆ)

1993-94ನೇ ಸಾಲಿನಲ್ಲಿ ರಾಜ್ಯ ದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮಂಜೂರಾತಿಗಾಗಿ ರಾಜ್ಯವಲಯದಲ್ಲಿ 35.23 ಲಕ್ಷರೂ.ಗಳನ್ನು ಜಿಲ್ಲಾ ವಲಯ ದಲ್ಲಿ 181.43 ಲಕ್ಷರೂಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.	1993-94ನೇ ಸಾಲಿನಲ್ಲಿ ಇದಕ್ಕಾಗಿ 2.97 ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿತ್ತು.

ಇ)

1993-94ನೇ ಸಾಲಿನಲ್ಲಿ ಹೊಳೇ ನರಸೀಪುರ ತಾಲ್ಲೂಕಿಗೆ ಮಂಜೂ ರಾಗಿದ್ದ ಒಟ್ಟು 3 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪೈಕಿ ಎರಡನ್ನು ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಪ್ರಾರಂಭಿಸಲಾಗಿದೆ.	ನಿಡುವಣಿಗೆ ಮಂಜೂರಾಗಿದ್ದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ದಿ: 15-8-93 ರಿಂದ ಪ್ರಾರಂಭಿಸ ಲಾಗಿದೆ. ಆದರೆ ಅನೇಕ ಬಾಡಿಗೆ ಮಂಜೂರಾಗಿದ್ದ ಮೆಟ್ರಿಕ್

ಉಳಿದ ಒಂದು ಅಂದರೆ ದೊಡ್ಡ ಕುಂಚಿಗೆ ಮಂಜೂರಾದ ವಿದ್ಯಾರ್ಥಿ ನಿಲಯವನ್ನು ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದೊರೆಯದೇ ಕಾರಣ ಇದೇ ತಾಲ್ಲೂಕಿನ ಹಳೇ ಕೋಟೆಗೆ ವರ್ಗಾಯಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಸಾಕಷ್ಟು ವಿದ್ಯಾರ್ಥಿಗಳು ಸಿಗುವುದಿಲ್ಲವೆಂಬ ಕಾರಣದಿಂದ ಇದೇ ತಾಲ್ಲೂಕಿನ ದೊಡ್ಡಕುಂಟೆಗೆ ದಿನಾಂಕ : 25-3-94ರ ಆದೇಶದಲ್ಲಿ ವರ್ಗಾಯಿಸಿದ ಪ್ರಯುಕ್ತ ಈ ವಿದ್ಯಾರ್ಥಿನಿಲಯದ ಪ್ರಾರಂಭವು ವಿಳಂಬವಾಗಿರುತ್ತದೆ.

ಈ)

ಈವರೆವಿಗೂ ಮಂಜೂರು ಮಾಡಿರುವುದಿಲ್ಲ.

ಈವರೆಗೆ 94-95ನೇ ಸಾಲಿನಲ್ಲಿ ಯಾವುದೇ ಹೊಸ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಿರುವುದಿಲ್ಲ.

ಉ)

ಹೌದು

ದೊಡ್ಡಕುಂಟೆ ಗ್ರಾಮಕ್ಕೆ ಮಂಜೂರಾಗಿರುವ ವಿದ್ಯಾರ್ಥಿ ನಿಲಯವನ್ನು ದಿನಾಂಕ : 4-7-94 ರಿಂದ ಪ್ರಾರಂಭಿಸಲಾಗಿದೆ.

ಬೈಲಹೊಂಗಲ ನಗರದಲ್ಲಿ ಹೊಸ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ

309 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರಸಭೆ ಸರಹದ್ದಿನಲ್ಲಿನ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಇಲ್ಲದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಒಳಚರಂಡಿ ಯೋಜನೆ ಇಲ್ಲದೇ ಇರುವುದರಿಂದ ಹೊಸ ಬಡಾವಣೆಗಳಲ್ಲಿ ವಾಸಿಸುವ ಜನರಿಗೆ ತುಂಬಾ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಒಳಚರಂಡಿ ಯೋಜನೆ ಕೈಕೊಳ್ಳಲು ಸರ್ಕಾರದವರು ಯಾವ ಕ್ರಮಕೈಗೊಳ್ಳುವರು?

ಈ) ಈ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಯೋಜನೆ ಕೈಕೊಳ್ಳಲು ಎಷ್ಟು ಹಣ ಬೇಕಾಗುವುದು?

ಉ) ಈ ಒಳಚರಂಡಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರವರು ಪುರಸಭೆಗೆ ಸಾಲ ರೂಪವಾಗಿ ಸಹಾಯ ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) - ಹೌದು -

ಆ) - ಹೌದು -